SC. No.10/2024
DW-2

ದಿನಾಂಕಃ 06-03-2026 ರಂದು ಸಾಕ್ಷಿಯನ್ನು ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲು ಃ ವಾದಿ ಪರ ಶ್ರೀ.ಜಿ.ಐ.ಝುಡ್ ವಕೀಲರಿಂದಃ**

1. ವಾದಿ ಮತ್ತು ಪ್ರತಿವಾದಿ ನಂ.1 ರವರ ಗಂಡ ಸ್ನೇಹಿತರಾಗಿದ್ದರು. ಅವರಿಬ್ಬರು ಹಣಕಾಸಿನ ವ್ಯವಹಾರ ಮಾಡುತ್ತಿದ್ದರು. ವಾದಿ ನೀರಾವರಿ ಜಮೀನು ಹೊಂದಿದ್ದು ಹಣಕಾಸಿನ ವ್ಯವಸ್ಥೆ ಚೆನ್ನಾಗಿದೆ ಎಂದರೆ ಸರಿ. ನಾನು, ವಾದಿ ಹಾಗೂ ಮೃತ ದಶರಥ ಒಂದೇ ಗ್ರಾಮದವರು ಎಂದರೆ ಸರಿ. ಬೀಳಗಿ ನ್ಯಾಯಾಲಯದಲ್ಲಿ ನನ್ನ ಅಕ್ಕತಂಗಿಯರು ಪಾಲು ವಾಟ್ನಿ ದಾವೆ ಹೂಡಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ವಾದಿ ಸಾಕ್ಷಿ ನುಡಿಯಲು ನನ್ನ ವಿರುದ್ದ ಬಂದಿದ್ದರು ಎಂದರೆ ಸರಿಯಲ್ಲ. ನನ್ನ ಅಕ್ಕತಂಗಿಯರ ಪರವಾಗಿ ದಾವೆ ನಡೆಸಲು ಶ್ರೀ.ಎಸ್.ಎನ್.ಕಂಬಾಗಿ ವಕೀಲರು ಹಾಜರ ಆಗಿದ್ದರು ಎಂದರೆ ಸರಿ. ನನ್ನ ಅಕ್ಕ ತಂಗಿಯರ ಪರವಾಗಿ ವಾದಿ ಬೀಳಗಿ ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯಲು ಬಂದ ಕಾರಣ ಈಗ ನಾನು ಆತನ ವಿರುದ್ದ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಗಂಡ ದಶರಥ ತನ್ನ ಪ್ರಾಪಂಚಿಕ ಅಡಚಣೆ ಸಲುವಾಗಿ ತಲಾ ರೂ.65,000/- ಯಂತೆ ನಾಲ್ಕು ಸಲಾ ವಾದಿಯಿಂದ ಪಡೆದು ಕೊಂಡಿದ್ದ ಎಂದರೆ ಸರಿಯಲ್ಲ. ವಾದಿ ಮತ್ತು ದಶರಥನ ನಡುವೆ ದಾಖಲೆ ಮಾಡಿಕೊಂಡಾಗ ನಾನು ಹಾಜರಿದ್ದೇನು. ವಾದಿ ಮತ್ತು ದಶರಥ ನಡುವೆ ಆಗಿರುವ ವ್ಯವಹಾರದ ನಡುವೆ ನಾನು ಇರಲಿಲ್ಲ.

2. ದಶರಥರವರು ವಾದಿಗೆ ಹಣಕಾಸಿನ ವ್ಯವಹಾರದಲ್ಲಿ ಪ್ರಾಮಿಸರಿ ನೋಟ ಬರೆದು ಕೊಟ್ಟಿದ್ದರು ಎಂದರೆ ಸರಿಯಲ್ಲ. ವಾದಿ ದಶರಥರವರಿಗೆ ಹಣ ಮರುಪಾವತಿ ಮಾಡುವಂತೆ ಕೇಳಿದಾಗ ಮುಂದೂಡುತ್ತಾ ಬಂದಾ ಎಂದರೆ ಸರಿಯಲ್ಲ. ಸದರಿ ಪ್ರಾಮಿಸರಿ ನೋಟ 2016 ರಲ್ಲಿ ಬರೆದುಕೊಟ್ಟ ಎಂದರೆ ಸರಿಯಲ್ಲ. ವಾದಿ ಪ್ರತಿವಾದಿಗಳಿಗೆ ಸದರಿ ಹಣವನ್ನು ಕೇಳುತ್ತಾ ಬಂದಿದ್ದನು ಎಂದರೆ ಸರಿಯಲ್ಲ. ವಾದಿಗೆ ಪ್ರತಿವಾದಿಗಳು ಮತ್ತು ದಶರಥ ಯಾವುದೇ ಹಣ ಕೊಡಬೇಕಾಗಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ದಶರಥರವರ ಜಮೀನಿನ ವ್ಯವಹಾರಕ್ಕೆ ಕೇಳಿಕೊಂಡಿದ್ದರು. ದಶರಥರವರ ಹೆಸರಿಗೆ ಒಂದು ಟ್ರಾಕ್ಟರ ಇತ್ತು ಎಂದರೆ ಸರಿ. ಸರಿದ ಟ್ರಾಕ್ಟರ ಮಾರಾಟ ಮಾಡಿ ಹಣ ಕೊಡುವಂತೆ ವಾದಿ

ದಶರಥರವರನ್ನು ಕೇಳಿಕೊಂಡಿದ್ದ ಎಂದರೆ ಸರಿ. ಪ್ರತಿವಾದಿಗಳ ಜೊತೆ ನನ್ನ ಸಂಬಂಧ ಚೆನ್ನಾಗಿದೆ ಎಂದರೆ ಸರಿ. ಪ್ರತಿವಾದಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ಸಹಿ/-

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,

ಜಮಖಂಡಿ

SC. No.10/2024

DW-3

ದಿನಾಂಕಃ 06-03-2026 ರಂದು ಸಾಕ್ಷಿಯನ್ನು ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲು ಃ ವಾದಿ ಪರ ಶ್ರೀ.ಜಿ.ಐ.ಝುಡ್ ವಕೀಲ**

1. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ತಯಾರಿಸಲು ನಾನೇ ಮಾಹಿತಿ ನೀಡಿದ್ದೇನೆ. 1 ನೇ ಪ್ರತಿವಾದಿ ಗಂಡ ದಶರಥ ನನ್ನ ಸ್ವಂತ ಅಣ್ಣ. ಪ್ರತಿವಾದಿಗಳು ಮತ್ತು ನಾನು ಬೇರೆ ಬೇರೆ ಮನೆಯ ವ್ಯವಹಾರ ಮಾಡುತ್ತೇವೆ ಎಂದರೆ ಸರಿ. ದಶರಥರವರು ಮೃತ ಪಟ್ಟು 9 ವರ್ಷಗಳಾಯಿತು. ವಾದಿ ಮತ್ತು ದಶರಥ ಸ್ನೇಹಿತರು. ವಾದಿ ಮತ್ತು ದಶರಥ ಒಬ್ಬರಿಗೊಬ್ಬರು ಮಾತನಾಡಿಕೊಂಡು ವ್ಯವಹಾರ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ವಾದಿಗೆ ನೀರಾವರಿ ಜಮೀನು ಇದ್ದು ಕಬ್ಬು ಬೆಳೆಯುತ್ತಾರೆ ಎಂದರೆ ಸರಿ. ವಾದಿಗೆ ಸುಮಾರು 20 ಎಕರೆ ಜಮೀನು ಇದೆ ಎಂದರೆ ನನಗೆ ಗೊತ್ತಿಲ್ಲ. ವಾದಿಯ ಆರ್ಥಿಕ ಸ್ಥಿತಿ ಚೆನ್ನಾಗಿದೆ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ಗಂಡ ದಶರಥ ತನ್ನ ಪ್ರಾಪಂಚಿಕ ಅಡಚಣೆ ಸಲುವಾಗಿ ತಲಾ ರೂ.65,000/- ಯಂತೆ ನಾಲ್ಕು ಸಲಾ ವಾದಿಯಿಂದ ಪಡೆದುಕೊಂಡಿದ್ದ ಎಂದರೆ ನನಗೆ ಗೊತ್ತಿಲ್ಲ. ಹಣಕಾಸಿನ ವ್ಯವಹಾರದ ಬಗ್ಗೆ ನನಗೆ ಏನು ಗೊತ್ತಿಲ್ಲ.

2. ದಶರಥ 2018 ರಲ್ಲಿ ಮೃತ ಪಟ್ಟನು ಎಂದರೆ ಸರಿ. ವಾದಿ ದಶರಥರವರ ಆರೋಗ್ಯ ಚೆನ್ನಾಗಿ ಇಲ್ಲದಾಗ ಶಿರುಗುಪ್ಪಿ ಗ್ರಾಮಕ್ಕೆ ಹೋಗಿ ಭೇಟಿಯಾಗುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ವಾದಿ ದಶರಥನಿಗೆ ಮತ್ತು ಪ್ರತಿವಾದಿಗಳಿಗೆ ತನ್ನ ಹಣವನ್ನು ಕೊಡುವಂತೆ ಯಾವತ್ತು ಕೇಳುತ್ತಿದ್ದ ಎಂದರೆ ನನಗೆ ಗೊತ್ತಿಲ್ಲ. ವಾದಿ ದಶರಥನ ಮೃತ ಕಾರ್ಯದ ದಿನ ಪ್ರತಿವಾದಿಗಳನ್ನು ಹಿರಿಯರ ಸಮ್ಮುಖ ತನ್ನ ಹಣ ವಾಪಸ್ಸು ಕೊಡುವಂತೆ ಕೇಳಿದ್ದ ಎಂದರೆ ಸರಿಯಲ್ಲ. ವಾದಿಗೆ ದಶರಥ ಮತ್ತು ಪ್ರತಿವಾದಿಗಳು ಯಾವುದೇ ಹಣ ಕೊಡಬೇಕಾಗಿಲ್ಲ ಎಂದು ವಾದಿ ಯಾವತ್ತು ಹೇಳಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಾವೆ ಚಾಲ್ತಿ ಇದ್ದಾಗ ಪ್ರತಿವಾದಿಗಳು ತಮ್ಮ ಪಾಲಿನ ಜಮೀನನ್ನು ಬೇಕಾಯ್ದಿಶಿರ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ವಾದಿ ಪ್ರತಿವಾದಿಗಳ

ಜಮೀನನ್ನು ಖರೀದಿ ಮಾಡುವುದಾಗಿ ಕೇಳಿದರು ಸಹಿತ ಅವರು ಮಾರಾಟ ಮಾಡಲಿಲ್ಲ ಎಂದರೆ ಸರಿಯಲ್ಲ. ದಶರಥ ಬದುಕಿದ್ದಾಗ ಟ್ರಾಕ್ಟರ ಇತ್ತು ಎಂದರೆ ಸರಿ. ಸದರಿ ಟ್ರಾಕ್ಟರ ಬೇಕಾಯ್ದೆಶಿರಿ ಮಾರಾಟ ಮಾಡಿದ್ದೇವು ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ನಾನು ಸಹಾಯ ಮಾಡುತ್ತೇನೆ ಎಂದರೆ ಸರಿ. ಪ್ರತಿವಾದಿಗಳಿಗೆ ಸಹಾಯ ಮಾಡಲು ಮತ್ತು ವಾದಿಯ ಹಣ ಲಪಟಾಯಿಸಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ಸಹಿ/-

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,

ಜಮಖಂಡಿ